**<u>ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ</u>**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ ವಿ ಓ ವಕೀಲರಿಂದಃ</u>**

1. ಪ್ರಾಂಸರಿ ಪೂರ್ಣ ವಿಚಾರ ನನಗೆ ಗೊತ್ತಿದೆ. ಪ್ರತಿವಾದಿಯರ ಸಂಪೂರ್ಣ ಪರಿಚಯ ಇದೆ. ಅಳಗವಾಡಿಯಲ್ಲಿ ವಾದಿಯ ಆಸ್ತಿ ಇದೆಯಾ ಎಂದರೆ ಇಲ್ಲ. ಅಳಗವಾಡಿಯಲ್ಲಿ ವಾದಿ ಟೀಚರ್ ಆಗಿದ್ದರು. ಸಹಿ ಮಾಡಲು ದಿಃ01.04.2023 ರಲ್ಲಿ ಪ್ರತಿವಾದಿ ಕೇಳಿಕೊಂಡರು. ಹಣ 01.04.2023 ರಂದು ಕೊಟ್ಟಿರುತ್ತಾರೆ. ದಿಃ17.05.2023 ಕ್ಕೆ ಪ್ರಾಂಸರಿ ಪತ್ರ ಬರೆಸಿಕೊಂಡು ಬಂದ ನಂತರ ಅದರ ಸಂಪೂರ್ಣ ಅಂಶ ನೋಡಿದ್ದೀರಾ ಎಂದರೆ ಮಾಹಿತಿ ಪಡೆದುಕೊಂಡಿರುತ್ತೇವೆ ಅಷ್ಟೆ. ಒಕ್ಕಣಿಕೆ ಓದಿದ್ದೀರಾ ಎಂದರೆ ಇಲ್ಲ. ಆದರೆ ಸಹಿ ಮಾಡಿರುತ್ತೇನೆ. ಖಾಲಿ ಪ್ರಾಂಸರಿ ತಂದಿದ್ದಿರಾ ಅಥವಾ ತುಂಬಿದ ಪ್ರಾಂಸರಿ ಪತ್ರ ತಂದಿದ್ದರಾ ಎಂದರೆ ತುಂಬಿದ ಪ್ರಾಂಸರಿ ತಂದಿರುತ್ತಾರೆ. ನಮ್ಮ ಸಮ್ಮುಖದಲ್ಲಿ ಸಹಿ ಮಾಡುವ ಕಾಲಕ್ಕೆ ಮಾರ್ಕ್ ಮಾಡುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯರು ಶರೀಕಾಗಿ ಸುಳ್ಳು ಪ್ರಾಂಸರಿ ಪತ್ರ ಸೃಷ್ಟಿಸಿ ಸುಳ್ಳು ಕೇಸು ಹಾಕಿರುತ್ತೇವೆ ಎಂದರೆ ಸರಿಯಲ್ಲ. ಪ್ರಾಂಸರಿ ಪತ್ರದಲ್ಲಿ ಗುರುತು ಇರುವ ಜಾಗದಲ್ಲಿ ಸಹಿ ಮಾಡಿದ್ದಾರೆ ಎಂದರೆ ಹೌದು. ಮೊದಲನೇ ಪ್ಯಾರಾದಲ್ಲಿ ಎರಡು ಕಡೆ ಮಾರ್ಕ್ ಮಾಡಿದ್ದಾರೆ, 2 ನೇ ಪ್ಯಾರಾದಲ್ಲಿ ಎರಡು ಕಡೆ ಮಾರ್ಕ ಮಾಡಿದ್ದಾರೆ ಎರಡು ಕಡೆ ಸಹಿ ಹಾಕಿದ್ದೀರಾ ಎಂದರೆ ಮಾರ್ಕ್ ಮಾಡಿದ ಜಾಗಕ್ಕೆ ಸಹಿ ಹಾಕಿರುತ್ತೇನೆ. ಹನಮಂತಪ್ಪ, ಪ್ರಕಾಶ್ ಬಿಟ್ಟು ಬೇರೆಯವರ ಸಹಿ ಯಾಕೆ ಮಾಡಿಸಿಕೊಂಡಿದ್ದೀರಾ ಎಂದರೆ ಅವರ ಮಕ್ಕಳು ಬಂದಿದ್ದರು ಮಾಡಿಸಿಕೊಂಡಿದ್ದೇನೆ. ಮಾರ್ಕ್ ಮಾಡಿರುವ ಕಡೆ ಸಹಿ ಬೇಡ ಅಂತ ಕೇಳಿದಿರಾ ಎಂದರೆ ಇಲ್ಲ. ವಾದಿಯ ಮನೆಯಲ್ಲಿ ಹಣ ಕೊಟ್ಟಿರುತ್ತಾರೆ. ಸಾಮಾನ್ಯವಾಗಿ 1 ಲಕ್ಷ ಹಣ ವ್ಯವಹಾರ ಮಾಡಿದರೆ ಚೆಕ್ , ಡಿಡಿ ಕೊಡುತ್ತಾರೆ ಎಂದರೆ ನಮ್ಮ ಹತ್ತಿರ ಕ್ಯಾಶ್ ಇತ್ತು ಕೊಟ್ಟೆವು ಎಂದು ಹೇಳುತ್ತಾರೆ. ಪ್ರತಿವಾದಿಗಳು ಸಹ ಸಂತೃಪ್ತಿ ಜೀವನ ನಡೆಸುತಿದ್ದರು

ಎಂದರೆ ಅವರು ಬೇರೆ ಜಮೀನು ಖರೀದಿಸಲು ಹಣ ಕೇಳಿದ್ದರು ಅದಕ್ಕೆ ಕೊಟ್ಟಿರುತ್ತೇವೆ. ವಾದಿ ಅಳಗವಾಡಿಯಲ್ಲೆ ಇರುತ್ತಾರೆ. ನಾನು ಮತ್ತು ವಾದಿ ಶರೀಕಾಗಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**